ವಿಶೇಷಾಂಕಗಳನ್ನು ಪ್ರಕಟಿಸಿದವು. ಹೀಗೆ ಕನ್ನಡ ಸಂವೇದನೆ, ಕನ್ನಡ ಸಂಸ್ಕೃತಿಯೊಳಗೆ ಅಂಬೇಡ್ಕರ್ ವಿಚಾರಗಳು ಸೇರಿಕೊಂಡವು. ಸಂಸ್ಕೃತಿ ಅಧ್ಯಯನ ಸಮಾನತೆಯ ಬಗೆಗಿನ ಚಿಂತನೆಗಳಲ್ಲಿ ಸಂವಿಧಾನ, ಪ್ರಜಾಪ್ರಭುತ್ವ, ಧರ್ಮ ಜಾತೀಯತೆ, ಆರ್ಥಿಕತೆ ಮುಂತಾದ ವಿಚಾರಗಳನ್ನು ಚರ್ಚಿಸುವಾಗ ಅಂಬೇಡ್ಕರ್ ವಿಚಾರಗಳು ನುಸುಳುತ್ತವೆ. ಕನ್ನಡದ ನವೋದಯ ಲೇಖಕರು, ಅಂಬೇಡ್ಕರ್ ಅವರ ಪರೋಕ್ಷ ಪ್ರಭಾವಕ್ಕೆ ಒಳಗಾಗಿ ತಮ್ಮ ಕೃತಿಗಳಲ್ಲಿ ಅವರ ವಿಚಾರಧಾರೆಯನ್ನು ಪ್ರತಿಪಾದಿಸಿದ್ದಾರೆ. ನವ್ಯದವರು ಸೃಜನಶೀಲ ಕೃತಿಯಲ್ಲಿ ಮತ್ತು ವೈಚಾರಿಕ ಲೇಖನಗಳಲ್ಲಿ ಅಂಬೇಡ್ಕರ್ ಅವರ ವಿಚಾರಗಳನ್ನು ಚರ್ಚಿಸಿದ್ದಾರೆ. ಅನಂತಮೂರ್ತಿ, ಚಂದ್ರಶೇಖರ ಪಾಟೀಲ, ತೇಜಸ್ವಿ, ಗೋಪಾಲಕೃಷ್ಣ ಅಡಿಗ ಇತ್ಯಾದಿ ಬಹುಮುಖ್ಯ ಲೇಖಕರನ್ನು ಒಳಗೊಂಡಂತೆ ಇಂದಿನ ಎಲ್ಲಾ ಲೇಖಕರು ಅಂಬೇಡ್ಕರ್ ಚಿಂತನೆಗಳ ಪ್ರಭಾವಕ್ಕೆ ಒಳಗಾಗಿದ್ದಾರೆ. ಮತ್ತು ಅವರ ವಿಚಾರಧಾರೆಗಳನ್ನು ಚರ್ಚಿಸಿದ್ದಾರೆ. ದಲಿತ ಬಂಡಾಯದ ಲೇಖಕರು ಹಾಗೂ ಇಂದಿನ ಯುವ ಲೇಖಕರೆಲ್ಲರೂ ಅಂಬೇಡ್ಕರ್ ವಿಚಾರಗಳನ್ನು ತಮ್ಮ ಸೃಜನಶೀಲ ಕೃತಿ ಮತ್ತು ವೈಚಾರಿಕ ಬರಹಗಳಲ್ಲಿ ತಂದಿದ್ದಾರೆ.

ಅಂಬೇಡ್ಕರ್ ವಿಚಾರಗಳು ಈಗ ಜಗತ್ತಿನಾದ್ಯಂತ ಚರ್ಚಿತವಾಗುತ್ತಿವೆ. ಕನ್ನಡದಲ್ಲಿಯಂತೂ ಈಗ ಅಂಬೇಡ್ಕರ್ ವಿಚಾರಗಳ ಪ್ರಸ್ತುತತೆಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಪತ್ರಿಕೆಗಳಲ್ಲಿ ವೈಚಾರಿಕ ಪ್ರಬಂಧಗಳಲ್ಲಿ ಚರ್ಚಿಸಲಾಗುತ್ತಿದೆ. ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಪೀಠಗಳು ಪ್ರಾರಂಭವಾಗಿ ಅಲ್ಲಿ ಅಂಬೇಡ್ಕರ್ ವಿಚಾರಗಳ ಬಗ್ಗೆ ಸರ್ಟಿಫಿಕೇಟ್ ಕೋರ್ಸ್ ಡಿಪ್ಲೊಮೊ ಕೋರ್ಸುಗಳನ್ನು ನಡೆಸಲಾಗುತ್ತಿದೆ.

ಅಂಬೇಡ್ಕರ್ ಎಲ್ಲ ಪ್ರಗತಿಪರ ಚಳವಳಿಗಳಿಗೆ ಪ್ರೇರಣೆ ನೀಡಿದವರು. ಮಹಿಳೆಯರಿಗೆ ಸಂಬಂಧಿಸಿದ ಹಿಂದೂ ಕೋಡ್ ಬಿಲ್ಲನ್ನು ಮಂಡಿಸಿ ಮಹಿಳೆಯರ ಹಕ್ಕುಬಾಧ್ಯತೆಗಳಿಗಾಗಿ ಹೋರಾಡಿದವರು. ಅದು ಪಾರ್ಲಿಮೆಂಟಿನಲ್ಲಿ ಅಂಗೀಕಾರವಾಗಿ ಮಸೂದೆಯಾಗದೆ ಇದ್ದಾಗ ತಮ್ಮ ಮಂತ್ರಿಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಇಂದು ಮಹಿಳೆಯರಿಗೆ ಸಿಕ್ಕರುವ ಎಲ್ಲ ಸೌಲಭ್ಯಗಳಿಗೆ ಅಂಬೇಡ್ಕರ್ ಅವರ ಈ ಮಸೂದೆಯೇ ಕಾರಣ. ಅಂಬೇಡ್ಕರ್ ಅವರು ಮಹಿಳೆಯರ ಹೋರಾಟಕ್ಕೂ ಸ್ಫೂರ್ತಿಯಾಗಿದ್ದಾರೆ. ಹಾಗೆಯೇ ರೈತ ಚಳವಳಿ, ಕಾರ್ಮಿಕ ಚಳವಳಿ, ಅಂಬೇಡ್ಕರ್ ವಿಚಾರಗಳಿಂದ ಪ್ರಭಾವಿತಗೊಂಡಿದೆ. ದಲಿತ ಚಳವಳಿಗಂತೂ ಅಂಬೇಡ್ಕರ್ ಅವರೇ ಪ್ರೇರಣೆ, ಸ್ಫೂರ್ತಿ ಎಲ್ಲವೂ.


**ಎಚ್. ದಂಡಪ್ಪ**

ಲೇಖಕರು ವಿಮರ್ಶಕರು ಮತ್ತು ಸಂಸ್ಕೃತಿ ಚಿಂತಕರು. 'ಭ್ರಮರ ಮತ್ತು ಕೀಟ', 'ಚಕೋರ ಮತ್ತು ಚಂದ್ರಮ', 'ಪ್ರಕೃತಿ ಮತ್ತು ಸಂಸ್ಕೃತಿ' ಇವರ ವಿಮರ್ಶೆಯ ಕೃತಿಗಳು. 'ಜಾಗತಿಕ ವಿಚಾರ ಸಾಹಿತ್ಯ', 'ಭಾರತೀಯ ವಿಚಾರ ಸಾಹಿತ್ಯ', 'ಅಂಬೇಡ್ಕರ್ ವಿಚಾರಗಳು', 'ಸುವರ್ಣ ಸಾಹಿತ್ಯ ವಿಮರ್ಶೆ' ಇವು ಇವರ ಮುಖ್ಯವಾದ ಸಂಪಾದಿತ ಕೃತಿಗಳು.